'ಆ ನಿಮ್ಮ ಅಂಕಲ್ ಯಾವ ಊರಿಂದ ಬಂದರು?'

'ಕಾಶ್ಮೀರ್‌ದಿಂದ'

'ಕಾಶ್ಮೀರ್ ಹೆಸರು ಕೇಳಿ ಕೃಷ್ಣನ ಹಣೆಯಲ್ಲಿ ಹೊಸ ಗೆರೆ ಮೂಡಿತು.

'ಅವರ ಫೋಟೋ ಏನಾದರೂ ಇದೆಯೇ?' ಎಂದು ಕೇಳಿದನು.

'ಇಲ್ಲ, ನಿಜಕ್ಕೂ ಅವರು ನಮ್ಮ ಬಳಗವಲ್ಲ. ನನ್ನ ತಂದೆಯ ಸ್ನೇಹಿತ'

'ಅವರನ್ನು ಭೇಟಿಯಾಗುವುದಕ್ಕೆ ನಿಮ್ಮ ಮನೆಗೆ ಯಾರಾದರೂ ಬಂದಿದ್ದರೇ?'

'ಯಾರೂ ಇಲ್ಲ. ಆದರೆ ಆ ದಿನ ಮಧ್ಯಾಹ್ನ ಸ್ವಲ್ಪ ಹೊತ್ತು ಅವರು ಹೊರಗೆಲ್ಲೋ ಹೋಗಿದ್ದರು. ಎಲ್ಲಿಗೆ ಅಂತ ನನಗೆ ಗೊತ್ತಿಲ್ಲ'

'ಫೋನ್ ನಂಬರ್ ಏನಾದರೂ ಕೊಟ್ಟಿದ್ದನಾ?'

'ಇಲ್ಲ, ಅವರ ಹತ್ತಿರ ಫೋನೇ ಇರಲಿಲ್ಲ. ಈ ದಿನಗಳಲ್ಲಿ ಫೋನ್ ಇಲ್ಲದಿರುವುದು ವಿಚಿತ್ರ ಅನಿಸಿತ್ತು ನನಗೆ'

'ಮತ್ತೆ ಹೇಗೆ ಕಂಡುಹಿಡಿಯುವುದು?..'

'ಒಂದು ಸಣ್ಣ ಐಡಿಯಾ ಇದೆ ಸರ್'

'ಏನದು?'

'ರೇಲ್ವೆ ಸ್ಟೇಷನ್ ಸಿ.ಸಿ. ಕ್ಯಾಮರಾದಲ್ಲಿ ಏನಾದರೂ ಸುಳಿವು ಸಿಗಬಹುದು'

'ಓಹ್ ಗುಡ್ ಐಡಿಯಾ' ಎಂದನು ಕೃಷ್ಣ ಕಣ್ಣರಳಿಸುತ್ತಾ.

—7—

ಸಾವಿರಾರು ಪ್ರಯಾಣಿಕರ ಮಧ್ಯದಲ್ಲಿ ಸಿ.ಸಿ. ಕ್ಯಾಮರಾದಲ್ಲಿ ಅವನನ್ನು ಹುಡುಕುವುದಕ್ಕೆ ಕೆಲವು ದಿನಗಳು ಬೇಕಾದವು. ಕೊನೆಗೆ ಸಿಕ್ಕಿತು.

'ಇವನೇ' ಎಂದಳು ಕಲ್ಯಾಣಿ ಸಂತೋಷದಿಂದ.

ಆದರೆ ಆ ಭಗೀರಥ ಪ್ರಯತ್ನ ಅಲ್ಲಿಗೇ ನಿಲ್ಲಲಿಲ್ಲ. ಫೋಟೋ ಸಿಕ್ಕರೆ ಏನು ಪ್ರಯೋಜನ? ಅವನ್ಯಾರೆಂದು ತಿಳಿಯಬೇಕಲ್ಲ. ರಿಕಾರ್ಡ್‌ನಲ್ಲಿ ಇರುವ ಎಲ್ಲ ಟೆರರಿಸ್ಟ್‌ಗಳ, ಕ್ರಿಮಿನಲ್‌ಗಳ ಫೋಟೋಗಳ ಜೊತೆ ಹೊಂದಿಸಿ ನೋಡುವುದಕ್ಕೆ ಎರಡು ದಿನ ಬೇಕಾಯ್ತು.

ಲಾಕಪ್‌ನಲ್ಲಿರುವ ಟೆರರಿಸ್ಟ್‌ಗಳು ಗುರ್ತು ಹಿಡಿಯಲಿಲ್ಲ, ಗುರ್ತು ಹಿಡಿದರೂ ಆ ಫೋಟೋದಲ್ಲಿರುವುದು ಯಾರೆಂದು ಹೇಳಲಿಲ್ಲ. ಎಲ್ಲಿ ಬಿದ್ದಿದ್ದ ಕಂಬಳಿ ಅಲ್ಲೇ ಬಿದ್ದಿದೆ ಎನ್ನುವಂತಹ ಪರಿಸ್ಥಿತಿ.

ಆ ಫೋಟೋ ಯಾರದೆನ್ನುವ ಬಗ್ಗೆ ಆಫೀಸರ್‌ಗಳ ಸಭೆ ನಡೆಯಿತು.

'ಯಾವನೋ ಸಣ್ಣ ಟೆರರಿಸ್ಟ್ ಇರಬಹುದು' ಎಂದನು ಸ್ವಾಮಿ,

ಅಲ್–ಬರ್ಕ್, ತೆಹ್ರಿಕ್–ಏ–ಜಿಹಾದ್, ಅಲ್–ಮುಜಾಹಿದ್ ಮುಂತಾದ ಸಂಘಟನೆಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು. 'ಇತ್ತೀಚೆಗೆ ಪ್ರತಿಯೊಬ್ಬನಿಗೂ ನಾಲ್ಕುಮಂದಿ ಗುಂಪು ಸೇರಿಸಿ ಅದಕ್ಕೆ ತಾನೇ ಲೆಫ್ಟಿನೆಂಟ್ ಎಂದು ಹೇಳಿಕೊಳ್ಳುವುದು ಫ್ಯಾಷನ್ ಆಗಿದೆ'

ನಿಜ ಎನ್ನುವಂತೆ ಎಲ್ಲರೂ ತಲೆಯಾಡಿಸಿದರು.

ತಮ್ಮ ಟೇಬಲ್ ಮೇಲಿರುವ ಫೋಟೋ ಭಾರತ ದೇಶದ ಭದ್ರತಾದಳ ಹುಡುಕುತ್ತಿರುವ ಮಿಜ್ರಾಡಿನ್‌ದೆಂದು ಯಾರಿಗೂ ಅನುಮಾನ ಬರಲಿಲ್ಲ.

ಆ ಯೋಚನೆ ಬಂದಿದ್ದು ಒಬ್ಬರಿಗೆ... ಕಲ್ಯಾಣಿಗೆ!

'ಅವನ ಕಣ್ಣಿನಲ್ಲಿ ಒಂದು ರೀತಿಯ ಸೇಡು, ದ್ವೇಷ, ಸಿಟ್ಟನ್ನು ನೋಡಿದೆ, ಅವನೊಬ್ಬ ಟೆರರಿಸ್ಟ್ ಹೌದೋ ಅಲ್ಲವೋ ಹೇಳಲಾರೆ. ಆದರೆ ಭಾರತದ ದೇಶದ ಮೇಲೆ ಮಡುಗಟ್ಟಿರುವ ದ್ವೇಷ, ಸಿಟ್ಟು ಇರುವವನ ಹಾಗೆ ಕಂಡನು' ಎಂದಳು ಕೃಷ್ಣನೊಂದಿಗೆ.

'ನಿಮ್ಮ ತಂದೆ ಅವನ ಬಾಲ್ಯಸ್ನೇಹಿತ. ಆದರೂ ಅನುಮಾನಿಸುತ್ತಿದ್ದೀರಾ?'

'ಟೆರರಿಸ್ಟ್‌ಗಳಿಗೆ, ಗೂಢಚಾರಿಗಳಿಗೆ ಸ್ನೇಹ ಅನ್ನುವುದು ಇರುವುದಿಲ್ಲ. ಅವನು ನನ್ನಪ್ಪನಿಗೆ ಸ್ನೇಹಿತನೇ ಆದರೂ ಈಗ ಬಹಳ ಟಾರ್ಚರ್ ಕೊಡುತ್ತಿರಬಹುದು' ಎಂದು ಅಪ್ಪನ ನೆನಪಾಗಿ ಚಿಂತೆ ವ್ಯಕ್ತಪಡಿಸಿದಳು.

'ಚಿಂತೆ ಮಾಡಬೇಡಿ, ನಾವೆಲ್ಲ ಅದೇ ಕೆಲಸ ಮೇಲಿದ್ದೇವೆ. ಆದಷ್ಟು ಬೇಗ ನಿಮ್ಮ ತಂದೆಯನ್ನು ಬಿಡಿಸುತ್ತೇವೆ'

ಆಗವಳು 'ನಿಮಗೆ ಷಕೀಲ್ ಅಫ್ರಿದೀ ಗೊತ್ತಾ?' ಎಂದು ಕೇಳಿದಳು.

'ಅವನ್ಯಾರು?'

'ನಮ್ಮಪ್ಪನ ಹಾಗೆ ಒಬ್ಬ ದುರದೃಷ್ಟವಂತ. ಟ್ವಿನ್ ಟವರ್ ಬ್ಲಾಸ್ಟ್‌ನಲ್ಲಿ 3000 ಮಂದಿಯನ್ನು ಸಾಯಿಸಿದ ಬಿನ್ ಲಾಡೆನ್ ತಲೆಗೆ ಅಮೆರಿಕಾ 17 ಕೋಟಿ ಬಹುಮಾನ ಪ್ರಕಟಿಸಿದೆ. ಆದರೂ ಹತ್ತು ವರ್ಷಗಳ ಕಾಲ ಅವನು ಎಲ್ಲಿದ್ದಾನೆಂಬುದೇ ತಿಳಿಯಲಿಲ್ಲ. ಕೊನೆಗೆ ಅವನು ಪಾಕಿಸ್ತಾನದ ಅಬ್ಬೊಟಾಬಾದ್ ಎಂಬ ಹಳ್ಳಿಯಲ್ಲಿ ಅಡಗಿದ್ದಾನೆ ಎಂಬ ಮಾಹಿತಿ ಸಿಕ್ಕಿತು' ಸ್ವಲ್ಪ ತಡೆದು ಮುಂದುವರೆಸಿದಳು. 'ಅವನನ್ನು ಬಂಧಿಸುವುದಕ್ಕೆ ಪಾಕಿಸ್ತಾನ್ ನೆರವು ಪಡೆಯುವ ಇಚ್ಛೆ ಅಮೆರಿಕಾಗೆ ಇರಲಿಲ್ಲ. ತನಗೆ ಕೆಟ್ಟ ಹೆಸರು ಬರುತ್ತದೆ ಎಂಬ ಕಾರಣಕ್ಕೆ ಅವನು ಪಾಕಿಸ್ತಾನದಲ್ಲಿರುವ ವಿಷಯವನ್ನು ಪಾಕಿಸ್ತಾನ್ ಒಪ್ಪಿಕೊಳ್ಳಲಿಲ್ಲ. ಅಲ್ಲದೆ ಅವನನ್ನು ರಾತ್ರೋರಾತ್ರಿ ದೇಶದಿಂದ ರಹಸ್ಯವಾಗಿ ಕಳಿಸುವ ಸಂಭವ ಇತ್ತು. ಒಂದು ವೇಳೆ ಅವನು ಸಿಕ್ಕರೂ ಕೇಸ್ ಹಾಕಿದರೆ ಮತ ಸಂಘರ್ಷ ಉಂಟಾಗಬಹುದು. ಅಂತರಾಷ್ಟ್ರ ಕೋರ್ಟು.... ವರ್ಷಗಟ್ಟಲೆ ಕೇಸು ಸಾಗುತ್ತದೆ. ಸಿಟ್ಟಿನಿಂದ ಕುದಿಯುತ್ತಿದ್ದ ಅಮೆರಿಕಾಗೆ ಅಷ್ಟು ಕಾಲ ಕಾಯುವ ತಾಳ್ಮೆ ಇರಲಿಲ್ಲ. ಅವನನ್ನು ಸಾಯಿಸಬೇಕು! ಆದ್ದರಿಂದ ಪಾಕಿಸ್ತಾನ್‌ಗೆ ತಿಳಿಯದ ಹಾಗೆ ಆ ಗ್ರಾಮ ಪ್ರವೇಶಿಸಿ ಅವನನ್ನು ಸಾಯಿಸಲು ನಿರ್ಧಾರ ಮಾಡಿತು.'

ತನಗೆ ಕೂಡ ತಿಳಿದಿರದ ಆ ವಿಷಯವನ್ನು ಕೃಷ್ಣ ಆಸಕ್ತಿಯಿಂದ ಕೇಳುತ್ತಿದ್ದನು.

'ಮೊದಲು ಅಲ್ಲಿರುವುದು ಬಿನ್ ಲಾಡೆನ್ ಎನ್ನುವುದನ್ನು ಕನ್‌ಫರ್ಮ್ ಮಾಡಿಕೊಳ್ಳಬೇಕಿತ್ತು. ಇಲ್ಲದಿದ್ದರೆ ತನ್ನ ಶ್ರಮವೆಲ್ಲ ವ್ಯರ್ಥವಾಗುವುದೂ ಅಲ್ಲದೆ, ಯಾವನೋ ಅಮಾಯಕನನ್ನು ಸಾಯಿಸಿದರೆ ದೇಶದ ಗೌರವಕ್ಕೆ ಧಕ್ಕೆ ಆಗುತ್ತದೆ. ಅಲ್ಲಿರುವುದು ಒಸಾಮಾ ಬಿನ್ ಲಾಡೆನ್ ಎನ್ನುವುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಷಕೀಲ್ ಅಫ್ರಿದಿ ಎಂಬ ಒಬ್ಬ ಪಾಕಿಸ್ತಾನೀ ಡಾಕ್ಟರ್‌ನನ್ನು ಬಳಸಿಕೊಂಡಿತು ಅಮೆರಿಕಾ. ಅವನು ಅಬ್ಬೊಟಾಬಾದ್‌ನಲ್ಲಿ ಉಚಿತ ವ್ಯಾಕ್ಸಿನೇಷನ್ ಶಿಬಿರ ಆರಂಭಿಸಿ ಸುತ್ತಮುತ್ತಲ ಹಳ್ಳಿಗಳ ಮಕ್ಕಳಿಗೆ ಸೇವೆ ಮಾಡುವ ನೆಪದಿಂದ ಲಾಡೆನ್‌ನ ಮಕ್ಕಳ ರಕ್ತದ ಸ್ಯಾಂಪಲ್ಸ್ ಶೇಖರಿಸಿದನು. ಬಿನ್ ಲಾಡೆನ್‌ನ ಸಹೋದರಿ ಅಮೆರಿಕದಲ್ಲಿದ್ದಳು. ಆ ಮಕ್ಕಳ ರಕ್ತವನ್ನು ಅವಳ ರಕ್ತದ ಡಿ.ಎನ್.ಎ.ದೊಂದಿಗೆ ಹೋಲಿಸಿ ನೋಡಿ, ಆ ಗ್ರಾಮದಲ್ಲಿ ಇರುವುದು ಬಿನ್ ಲಾಡೆನ್ನನೇ ಎಂದು ಖಚಿತಪಡಿಸಿಕೊಳ್ಳಲಾಯ್ತು, ನಂತರ ವಿಮಾನಗಳಿಂದ ಮಿಂಚಿನ ಧಾಳಿ ನಡೆಸಿ ಅವನನ್ನು ಸಾಯಿಸಿತು. ಆದರೆ ತಮಗೆ ತಿಳಿಸದೆ ತಮ್ಮ ದೇಶ ಪ್ರವೇಶ ಮಾಡಿದ್ದಕ್ಕೆ ಪಾಕಿಸ್ತಾನ್ ಅಮೆರಿಕಾದ ಮೇಲೆ ಸಿಟ್ಟಾಯಿತು. ಆದರೆ ಆ ಬಲಶಾಲಿಯಾದ ದೇಶವನ್ನು ಏನೂ ಮಾಡಲು ಸಾಧ್ಯವಿಲ್ಲ. ಹಾಗಾಗಿ, ಅತ್ತೆ ಮೇಲಿನ ಸಿಟ್ಟನ್ನು ತೊತ್ತಿನ ಮೇಲೆ ತೀರಿಸಿಕೊಂಡರು ಎಂಬಂತೆ ಡಾಕ್ಟರ್ ಷಕೀಲ್‌ನನ್ನು ಅರೆಸ್ಟ್ ಮಾಡಿದರು. ಒಬ್ಬ ಟೆರರಿಸ್ಟ್‌ನನ್ನು ಹಿಡಿಯಲು ಶ್ರಮ ವಹಿಸಿದ ಷಕೀಲ್ ಮೇಲೆ ಟೆರರಿಸ್ಟ್ ಎಂಬ ಮುದ್ರೆ ಒತ್ತಿ ಜೈಲ್‌ನಲ್ಲಿ ಇಟ್ಟಿತು. ಅವನು ಇಂದಿಗೂ ಪಾಕಿಸ್ತಾನದ ಜೈಲಿನಲ್ಲಿದ್ದಾನೆ. ನೋವಿನ ಸಂಗತಿ ಏನೆಂದರೆ ತಮಗಾಗಿ ಅಷ್ಟು ರಿಸ್ಕ್ ತೆಗೆದುಕೊಂಡ ಷಕೀಲ್‌ನನ್ನು ರಕ್ಷಿಸುವ ಪ್ರಯತ್ನವನ್ನೇ ಮಾಡಲಿಲ್ಲ ಅಮೆರಿಕಾ!

'ನೀವು ಹೇಳಿದ್ದು ನಿಜವೇ. ಗೂಢಚರ್ಯೆಯಲ್ಲಿ ಯಾವ ತತ್ವ, ಸಿದ್ಧಾಂತ, ಬಂಧುತ್ವ ಇರುವುದಿಲ್ಲ'

ಅವಳು ಹಲ್ಲು ಕಚ್ಚಿ 'ನಾನೀ ಕಥೆ ಹೇಳಿದ್ದು ಕೊನೆಯಲ್ಲಿ ನಿಮ್ಮ ನೀತಿ ವಾಕ್ಯ ಸೇರಿಸಲಿಕ್ಕಲ್ಲ. ದೇಶ ಚೆನ್ನಾಗಿರಬೇಕೆಂದು ತಮ್ಮ ಪ್ರಾಣ ಪಣಕ್ಕೊಡ್ಡಿ ಕೆಲಸ ಮಾಡಿದ ನಮ್ಮ ತಂದೆಯ ಸೇವೆಯನ್ನು ಚೆನ್ನಾಗಿ ಬಳಸಿಕೊಂಡು ಈಗವರು ಅಪಾಯಕ್ಕೆ ಸಿಲುಕಿದ ಕೂಡಲೆ ಕೈ ತೊಳೆದುಕೊಂಡು ಬಿಟ್ಟಿತು ನಮ್ಮ ಘನ ಸರ್ಕಾರ. ಸಸ್ಪೆಕ್ಟ್‌ಗಳ ಲಿಸ್ಟ್‌ನಲ್ಲಿ ಅವರ ಹೆಸರು ಸೇರಿಸಿ ಎನ್‌ಕ್ವೈರಿ ನೆಪದಲ್ಲಿ ನಮ್ಮ ಮನೆಗೆ ಪೊಲೀಸರನ್ನು ಕಳಿಸಿತು' ಎಂದಳು.

ಅವನು ನೊಂದ ಸ್ವರದಲ್ಲಿ 'ಇಲ್ಲ, ಇಲ್ಲ. ನಾವು ಮಾಡಬಹುದಾದನ್ನೆಲ್ಲ ಮಾಡುತ್ತಾ ಇದ್ದೇವೆ. ಸಮಸ್ಯೆ ಏನೆಂದರೆ ಅವರನ್ನು ಕರೆದೊಯ್ದವನು ಯಾರು ಎಂದು ಗೊತ್ತಾಗದೆ ಮುಂದುವರೆಯಲು ಸಾಧ್ಯವಿಲ್ಲ. ಇಬ್ಬರೂ ಸೇರಿ ಒಟ್ಟಿಗೆ ಹೋದರೇ? ಬಲವಂತವಾಗಿ ಕರೆದೊಯ್ಯಲಾಯಿತೇ? ಇದೆಲ್ಲ ಗೊತ್ತಾಗಬೇಕು'.

'ನೆಹರೂ ಅವರ ಟೇಬಲ್ ಮೇಲೆ 'ನನಗೆ ಬೇಕಿರುವುದು ನೆಪಗಳಲ್ಲ, ಫಲಿತಾಂಶಗಳು' ಎಂಬ ಬೋರ್ಡ್ ಇರುತ್ತಿತ್ತಂತೆ.'

ಕೃಷ್ಣ ಬೇಸರಗೊಂಡು 'ನಮ್ಮ ಚೀಫ್ ಕೂಡಾ ಈ ರೀತಿ ಯಾವತ್ತೂ ನಿಷ್ಠೂರವಾಗಿ ಮಾತಾಡಿರಲಿಲ್ಲ' ಎಂದನು.

'ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುವ ತಂದೆ